ಕನ್ನಡಪ್ರಭ

**Saturday 09th November 2024**

## 8th International Conference held at RV College of Engineering

ರಾಮಚಂದ್ರಪ್ಪ, ಸಿ.ಶ್ರೀನಿವಾಸ್, ಆನಂದ್ ಸಿ.ತಿರುಮಲ, ಚಿನ್ನಪ್ಪ, ಆದಿ ನಾರಾಯಣ, ತಿಮ್ಮರಾಯಪ್ಪ, ಕೃಷ್ಣಪ್ಪ, ರಾಮಣ್ಣ ಇದ್ದರು.

... ಪ್ರೋಗ್ರಾಮ್ ಮ್ಯಾನೇಜರ್‌ಸುಜಾತಾ, ಮುಖ್ಯೋಪಾಧ್ಯಾಯ ಗಂಗರಾಜು, ಮುಖಂಡರಾದ ಶಿವಕುಮಾರ್, ಸುರೇಶ್ ಕೆಂಪೇಗೌಡ, ಪಾಂಡುರಂಗರಾವ್, ಲಕ್ಕಣ್ಣ ಉಪಸ್ಥಿತರಿದ್ದರು.

**ಹೊಸ ತಂತ್ರಜ್ಞಾನ** | ಆರ್‌ವಿ ಕಾಲೇಜಿನಲ್ಲಿ ನಡೆದ ಸಮ್ಮೇಳನದಲ್ಲಿ ಪ್ರೊ.ಎಸ್.ಎಸ್.ಐಯ್ಯಂಗಾರ್ ಅಭಿಮತ

# ಮನುಷ್ಯನ ಬುದ್ಧಿಶಕ್ತಿಯನ್ನು ಎಐ ಮೀರಿಸಲಿದೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮನುಷ್ಯನ ಬುದ್ಧಿಶಕ್ತಿಯಿಂದಲೇ ಜನ್ಮತಾಳಿದ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಈಗ ಮಾನವನಿಗೆ ಸವಾಲೆಸೆಯುತ್ತಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನೇ ಮಾಡುತ್ತಿದ್ದು, ಕೆಲವೇ ವರ್ಷದಲ್ಲಿ ಮನುಷ್ಯನ ಬುದ್ಧಿಶಕ್ತಿಯನ್ನು ಮೀರಿಸಲಿದೆ ಎಂದು ಯುಎಸ್‌ಎ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾನಿಲಯಧ ಪ್ರೊ.ಎಸ್.ಎಸ್.ಐಯ್ಯಂಗಾರ್ ಅಭಿಪ್ರಾಯಪಟ್ಟರು.

ಶುಕ್ರವಾರ ಮೈಸೂರು ರಸ್ತೆಯಲ್ಲಿರುವ ಆರ್‌ವಿ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿರುವ ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಾನಿಕ್ ಆ್ಯಂಡ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್(ಐಇಇಇ) ಅಂತಾರಾಷ್ಟ್ರೀಯ ಸಮ್ಮೇಳನ ಸಿಎಸ್‌ಐಟಿಎಸ್‌ಎಸ್-2024 ಉದ್ಘಾಟಿಸಿ ಅವರು ಮಾತನಾಡಿದರು.

ಕೃತಕ ಬುದ್ಧಿಮತ್ತೆಯ ಸಂಶೋಧನೆಗಳು ಮತ್ತು ಇದರಹೊಸಅನ್ವೇಷಣೆಗಳುಹೆಚ್ಚಿನಬಂಡವಾಳವನ್ನು ಬಯಸುವುದರಿಂದ ಖಾಸಗಿ ಸಂಸ್ಥೆಗಳು ಇದರಲ್ಲಿ ಮುಂದಿದ್ದು, ಶ್ರೀಮಂತ ರಾಷ್ಟ್ರಗಳು ತಮ್ಮ ದೇಶದ ನಾಗರಿಕ ಸೌಲಭ್ಯ, ಆರೋಗ್ಯ ಸೌಲಭ್ಯ, ಸಂವಹನ, ಸಂಚಾರಮೊದಲಾದಎಲ್ಲಾಕ್ಷೇತ್ರಗಳಲ್ಲೂಎಐಅನ್ನು ಬಳಸಿಕೊಂಡು ಜೀವನವನ್ನು ಸುಗಮಗೊಳಿಸಲು ಮುಂದಾಗಿವೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ಅಥವಾ ಬಡ ದೇಶಗಳು ಈ ಎಲ್ಲಾ ತಾಂತ್ರಿಕ ನಾವೀನ್ಯತೆಯನ್ನು ಅಳವಡಿಸಿಕೊಳ್ಳಲಾಗದೆ ಇವುಗಳ ಬಳಕೆಯಲ್ಲಿ, ಸಂಶೋಧನೆಯಲ್ಲಿ ಹಿಂದಿವೆ ಎಂದು ಹೇಳಿದರು.




ನಗರ ಮೈಸೂರು ರಸ್ತೆಯಲ್ಲಿರುವ ಆರ್‌ವಿ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿರುವ ಐಇಇಇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಯುಎಸ್‌ಎ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾನಿಲಯದ ಪ್ರೊ.ಎಸ್.ಎಸ್.ಐಯ್ಯಂಗಾರ್ ಅವರು ಸಿಎಸ್‌ಐಟಿಎಸ್‌ಎಸ್-2024 ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.

ಯುಎಸ್‌ಎ ಮೇಲಹ್‌ನ ಸಹ ಸಂಸ್ಥಾಪಕಿ ಮತ್ತು ಸಿಎಂಒ ಚೈತ್ರ ವೇಡುಲ್ಲಪಳ್ಳಿ ಮಾತನಾಡಿ, ಕೃತಕ ಬುದ್ಧಿಮತ್ತೆ ಕ್ಲೌಡ್ ಮತ್ತು ಎಲ್‌ಒಟಿ ತಂತ್ರಜ್ಞಾನಗಳು ಉದ್ಯಮಗಳಿಗೆ ಅಪಾರ ಅವಕಾಶಗಳು ಹಾಗೂ ಸವಾಲುಗಳನ್ನು ನೀಡುತ್ತವೆ. ಎಐ ಒಂದು ಪರಿವರ್ತನಾತ್ಮಕಸಾಧನವಾಗಿದ್ದು, ಸಮುದಾಯಗಳಲ್ಲಿ ಆರ್ಥಿಕ ಸಮೃದ್ಧಿ ಮತ್ತು ಡಿಜಿಟಲ್ ಸಮಾನತೆ ಸಾಧಿಸಲು ಸಹಾಯ ಮಾಡುತ್ತವೆ ಎಂದರು. ಕಾರ್ಯಕ್ರಮದಲ್ಲಿ ಡಾರ್ಟ್‌ಮಂಡ್ ಅಪ್ಲೈಡ್‌ಸೈನ್ಸ್ ಆ್ಯಂಡ್ ಆರ್ಟ್ಸ್ ಯುನಿವರ್ಸಿಟಿಯ ಪ್ರೊ.ಡಾ। ಇಂ.ವಿನೋದ್ ರಾಜಮಣಿ, ಐಐಎಸ್ಸಿ ಪ್ರಾಧ್ಯಾಪಕ ಡಾ। ಟಿ. ಶ್ರೀನಿವಾಸ್, ಆರ್‌ಎಸ್‌ಎಸ್‌ಟಿ ಅಧ್ಯಕ್ಷ ಡಾ। ಎಂ.ಪಿ.ಶ್ಯಾಮ್ ಇದ್ದರು.